ಸೆಲೆಬ್ರಿಟಿ

■ ಹನಿ




## ಮುಗಿಯಿತೆ ಆಟ?

ಎಲ್ಲ ಚೆನ್ನಾಗಿದ್ದಾಗ ಮಾಧ್ಯಮಗಳಿಂದ 'ಸಿಡಿಲಬ್ಬರದ ಬ್ಯಾಟ್ಸ್‌ಮನ್' ಮತ್ತು 'ನಜಾಫ್‌ಗಢದ ನವಾಬ' ಎಂದು ಕಿವಿಗಡಚಿಕ್ಕುವಂತೆ ಹೊಗಳಿಸಿಕೊಂಡಿದ್ದ ವೀರೇಂದ್ರ ಸೆಹ್ವಾಗ್ ಇದೀಗ ಭಾರತೀಯ ಕ್ರಿಕೆಟ್ ಟೆಸ್ಟ್ ತಂಡದಿಂದಲೂ ಹೊರಬಿದ್ದಿದ್ದಾರೆ. ಭಾರತ ಪ್ರವಾಸದಲ್ಲಿರುವ ಆಸ್ಟ್ರೇಲಿಯಾ ತಂಡದ ವಿರುದ್ಧದ ಮೂರನೇ ಮತ್ತು ನಾಲ್ಕನೇ ಟೆಸ್ಟ್‌ಗೆ ಆಯ್ಕೆಯಾದ ತಂಡದಲ್ಲಿ ಸೆಹ್ವಾಗ್ ಇಲ್ಲ. 'ನನ್ನ ಬ್ಯಾಟಿಂಗ್ ಶಕ್ತಿಯ ಮೇಲೆ ನನಗೆ ನಂಬಿಕೆಯಿದೆ. ಮತ್ತೆ ಮರಳಿ ತಂಡಕ್ಕೆ ಬರುತ್ತೇನೆ' ಎಂದು ಸೆಹ್ವಾಗ್ ತಕ್ಷಣದ ಪ್ರತಿಕ್ರಿಯೆ ನೀಡಿದ್ದಾರೆ. ಆದರೆ ಅಷ್ಟು ಸುಲಭವೆ? ತಜ್ಞರ ಪ್ರಕಾರ, 'ಕಷ್ಟ.. ಬಲು ಕಷ್ಟ..!'

2001ರಲ್ಲಿ ಭಾರತೀಯ ಟೆಸ್ಟ್ ಕ್ರಿಕೆಟ್ ತಂಡವನ್ನು ಪ್ರವೇಶಿಸಿದವರು ಸೆಹ್ವಾಗ್. 12 ವರ್ಷಗಳ ಕಾಲ ತಂಡದಲ್ಲಿ ಉಳಿದುಕೊಂಡದ್ದು ದೊಡ್ಡ ಸಾಧನೆಯೇ. ಅವರ ಅತ್ಯುತ್ತಮ 'ಫಾರ್ಮ್'ನ ಸಮಯದಲ್ಲಿ ಎದುರಾಳಿ ತಂಡದ ಬೌಲರ್‌ಗಳಿಗೆ 'ಭಯೋತ್ಪಾದಕ'ನಂತೆ ಪರಿಣಮಿಸಿದ್ದು ಅದಕ್ಕಿಂತ ದೊಡ್ಡ ಸಾಧನೆ. ವಯಸ್ಸು (34) ಯಾರನ್ನೂ ಕಾಡದೆ ಬಿಡುವುದಿಲ್ಲ. (ಸಚಿನ್ ನನ್ನು ಹೊರತು ಪಡಿಸಿ!) ಕಣ್ಣ ದೃಷ್ಟಿ ಮಂಜಾಗುವುದು ಮತ್ತು ವಿಕೆಟ್ ನಡುವಣ ಓಟದ ಚುರುಕು ಕಡಿಮೆಯಾಗುವುದು ಸಹಜವೇ. ಕಳೆದ 5 ಇನಿಂಗ್ಸ್‌ಗಳಲ್ಲಿ ವೀರೂ ಗಳಿಸಿದ್ದು ಕೇವಲ 76 ರನ್. ಕಳೆದ 20 ಇನಿಂಗ್ಸ್‌ಗಳಲ್ಲಿ ಗಳಿಸಿದ್ದು ಒಂದು ಶತಕ ಮತ್ತು ಇನ್ನೊಂದು ಅರ್ಧ ಶತಕ ಮಾತ್ರ. ಹಾಗಾಗಿ ಅವರನ್ನು ಉಳಿಸಿಕೊಳ್ಳಲು ಆಯ್ಕೆಗಾರರಿಗೂ ಸಾಧ್ಯವಾಗಲಿಲ್ಲ.

ಗೌತಮ್ ಗಂಭೀರ್, ವೀರೇಂದ್ರ ಸೆಹ್ವಾಗ್ ಜಗತ್ತಿನ ಅತ್ಯುತ್ತಮ ಟೆಸ್ಟ್ ಓಪನರ್‌ಗಳು ಎನ್ನುವುದಂತೂ ನಿಜ. 87 ಇನಿಂಗ್ಸ್‌ಗಳಲ್ಲಿ ಇಬ್ಬರೂ ಒಟ್ಟು ಸೇರಿ ಈವರೆಗೆ 4412 ರನ್‌ಗಳನ್ನು ಹೊಡೆದಿರುವುದು ಅಪೂರ್ವ ದಾಖಲೆಯೇ. 2007ರಲ್ಲಿ ಒಮ್ಮೆ ಇಂಗ್ಲೆಂಡ್ ವಿರುದ್ಧ ಟೆಸ್ಟ್‌ಗೆ ಡ್ರಾಪ್ ಆಗಿದ್ದ ವೀರೂ, ಅದೇ ವರ್ಷ ಆಸೀಸ್ ವಿರುದ್ಧ ಟೆಸ್ಟ್‌ಗೆ ಮರಳಿ ಆಯ್ಕೆಯಾಗಿದ್ದರು. ಅದಕ್ಕೆ ಆಗಿನ ನಾಯಕ ರಾಹುಲ್ ಡ್ರಾವಿಡ್ ಒತ್ತಾಸೆಯಿತ್ತು. ಈಗ ನಾಯಕ ದೋನಿ ಅಂತಹ ಒತ್ತಡ ಹೇರುವುದಿಲ್ಲ ಎನ್ನುವುದಂತೂ ಗ್ಯಾರಂಟಿ.

ಸದ್ಯಕ್ಕೆ ಶಿಖರ್ ಧವನ್, ವೀರೂ ಸ್ಥಾನವನ್ನು ತುಂಬಿದ್ದಾರೆ. ಅವರು ವಿಫಲ ರಾದರೆ ಅಜಿಂಕ್ಯಾ ರಹಾನೆ ಕಾಯುತ್ತಿದ್ದಾರೆ. ವೀರೂ ಮರಳಿ ಬರುವುದು ಕಷ್ಟವೇ. ಆದರೆ ಆಯ್ಕೆಗಾರರು ವೀರೂನನ್ನು ಕೈಬಿಟ್ಟ ಬಳಿಕ 15ರ ತಂಡಕ್ಕೆ ಇನ್ನೊಬ್ಬರನ್ನು ಆಯ್ಕೆ ಮಾಡದೇ ಇರುವುದು ಏನನ್ನು ಸೂಚಿಸುತ್ತದೆ? ವೀರೂ ಮರಳಿ ಬರಬಹುದು ಎಂಬ ಮುನ್ಸೂಚನೆಯೆ? ದಕ್ಷಿಣ ಆಫ್ರಿಕಾಕ್ಕೆ ಭಾರತ ಪ್ರವಾಸ ತೆರಳುವುದು ಈ ವರ್ಷದ ಕೊನೆಗೆ. ಅದಕ್ಕೂ ಮುನ್ನ ದೇವಧರ್, ರಣಜಿ, ಐಪಿಎಲ್... ಸಾಮರ್ಥ್ಯ ಸಾಬೀತಿಗೆ ವೀರೂಗೆ ಅವಕಾಶಗಳಿವೆ. 'ನಜಾಫ್‌ಗಢದ ನವಾಬ'ನ ಅಭಿಮಾನಿಗಳಂತೂ ತೀರಾ ಆಶಾವಾದಿಗಳೇ. ●

---

## ಕೋಟ್ಯಧಿಪತಿ ಮಹಿಳೆ



ಫೋರ್ಬ್ಸ್ ಪಟ್ಟಿ ಮತ್ತೆ ಪ್ರಕಟವಾಗಿದೆ. ಈ ಸಲ 'ಜಗತ್ತಿನ ಅತ್ಯಂತ ದೊಡ್ಡ ಶ್ರೀಮಂತೆ'ಯಾಗಿ ಪ್ಯಾರಿಸ್‌ನ 90ರ ಇಳಿವಯಸ್ಸಿನ ಉದ್ಯಮಿ ಲಿಲಿಯೇನ್ ಬೆಟ್ಟನ್‌ಕೋರ್ಟ್ ಆಯ್ಕೆ ಆಗಿದ್ದಾರೆ. ಕಳೆದ ವರ್ಷ ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿದ್ದ ವಾಲ್‌ಮಾರ್ಟ್ ಒಡತಿ ಕ್ರಿಸ್ಟೀ ವಾಲ್ಟನ್‌ಳನ್ನು ಲಿಲಿಯೇನ್ ಎರಡನೆ ಸ್ಥಾನಕ್ಕೆ ಹಿಂದಿಕ್ಕಿದ್ದಾರೆ. ಕಾಸ್ಮೆಟಿಕ್ ದೈತ್ಯ ಕಂಪೆನಿ ಲೋರಿಯಲ್‌ನ ಅತ್ಯಂತ ಹೆಚ್ಚು ಷೇರು ಹೊಂದಿರುವ, ನಿರ್ದೇಶಕಿಯೂ ಆಗಿರುವ ಲಿಲಿಯೇನ್, ನೆಸ್ಲೆ ಕಂಪೆನಿಯಲ್ಲೂ ಸಾಕಷ್ಟು ಷೇರು ಹೊಂದಿದ್ದಾರೆ.

1987ರಲ್ಲಿ ಫೋರ್ಬ್ಸ್ ಮ್ಯಾಗಸಿನ್ ಜಗತ್ತಿನ ಕೋಟ್ಯಧೀಶರ ಪಟ್ಟಿ ಪ್ರಕಟಿಸಲು ಆರಂಭಿಸಿದಂದಿನಿಂದಲೂ ಲಿಲಿಯೇನ್‌ಗೆ ಆ ಪಟ್ಟಿಯಲ್ಲಿ ಸ್ಥಾನ ಇದ್ದೇ ಇದೆ. ಲೋರಿಯಲ್ ಕಂಪೆನಿಯನ್ನು ಸ್ಥಾಪಿಸಿದ ಆಕೆಯ ಅಪ್ಪನೇ ಅದಕ್ಕೆ ಕಾರಣ. ಅಪ್ಪನ ನಿಧನದ ಬಳಿಕ ಆಸ್ತಿ ಮಗಳ ಪಾಲಾಯಿತು. ಪ್ಯಾರಿಸ್‌ನ ಎಲ್ಲ ಕೋಟ್ಯಾಧೀಶರಂತೆಯೇ ಈಕೆಗೂ ರಾಜಕೀಯ ಪಕ್ಷಗಳಿಗೆ ಗುಪ್ತ ನಿಧಿ ವಿತರಿಸಿದ ಕುಖ್ಯಾತಿಯಿದೆ. ಫ್ರಾನ್ಸ್‌ನ ಅಧ್ಯಕ್ಷ ಸರ್ಕೋಜಿ ಈಕೆಯ ಮನೆಗೆ ಭೇಟಿ ಕೊಟ್ಟಾಗಲೆಲ್ಲ ಕವರ್‌ನಲ್ಲಿ ಲಕ್ಷಗಟ್ಟಳೆ ಯೂರೋಗಳನ್ನು ಪಡೆಯುತ್ತಿದ್ದನಂತೆ. ಫ್ರಾನ್ಸ್‌ನಲ್ಲಿ ರಾಜಕೀಯ ಪಕ್ಷಗಳಿಗೆ ದೇಣಿಗೆ ಕೊಡುವಾಗ 150 ಯೂರೋ-ಗಿಂತ ಜಾಸ್ತಿ ಇದ್ದರೆ ಚೆಕ್‌ನಲ್ಲೇ ಕೊಡಬೇಕೆಂಬ ಕಾನೂನಿದೆ. ಕಾನೂನು ಉಲ್ಲಂಘಿಸಿದ್ದಕ್ಕೆ ಈಕೆಗೆ ಶಿಕ್ಷೆಯೇನೂ ಆಗಲಿಲ್ಲ. ಈಕೆಯ ಗಂಡ ಬೆಟ್ಟನ್ ಕೋರ್ಟ್ ಒಂದು ಕಾಲದಲ್ಲಿ ನಾಜಿಗಳಿಗೆ ನೆರವು ನೀಡಿದ ಆರೋಪಕ್ಕೆ ಒಳ-ಗಾದರೂ, ಆಳುವ ಪಕ್ಷದ ಕೃಪೆಯಿಂದಾಗಿ ಜೈಲುಪಾಲಾಗದೆ ಉಳಿದುಕೊಂಡ.

ಲಿಲಿಯೇನ್‌ಳದ್ದು ದಾನ- ಧರ್ಮದಲ್ಲೂ ಎತ್ತಿದ ಕೈ. ಈಕೆ ನಡೆಸುವ ಬೆಟ್ಟನ್‌ಕೋರ್ಟ್ ಸ್ಕಲ್ಲರ್ ಫೌಂಡೇಶನ್ ಎಂಬ ದತ್ತಿ ಸಂಸ್ಥೆಗೆ ವಾರ್ಷಿಕ 14 ದಶಲಕ್ಷ ಯೂರೋ ಬಜೆಟ್ ಇದೆ. ಅದರಲ್ಲಿ ಶೇಕಡಾ 50ರಷ್ಟು ವೈಜ್ಞಾನಿಕ ಶಿಕ್ಷಣ ಮತ್ತು ಸಂಶೋಧನೆಗೆ ಮೀಸಲಾಗಿದೆ. ಶೇಕಡಾ 12ರಷ್ಟು ಕಲೆ- ಸಂಸ್ಕೃತಿ ಕ್ಷೇತ್ರಕ್ಕೆ ಹೋಗುತ್ತದೆ. ಎಷ್ಟೇ ಕೊಟ್ಟರೂ ಈಕೆಯ ಒಟ್ಟು ಆಸ್ತಿಯ ಮೊತ್ತ (ಈಗ 30 ಶತಕೋಟಿ ಅಮೆರಿಕನ್ ಡಾಲರ್) ಇನ್ನೆರಡು ತಲೆಮಾರಿಗೂ ಕರಗುವ ಹಾಗೆ ಕಾಣುತ್ತಿಲ್ಲ. ●


Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008,


©All rights reserved. Reproduction in whole or in part without permission is prohibited.


RNI No 7891/65